ಅವಳ ಮಾತಿನಲ್ಲಿ 'ನೀ ಯಾರು ಕೇಳಲು' ಎಂಬ ಅಹಂಕಾರ ಇತ್ತು.

ಅದ್ಯಾವುದರ ಬಗ್ಗೆಯೂ ತಲೆ ಕೆಡಸಿಕೊಳ್ಳದ ಇನ್‌ಸ್ಪೆಕ್ಟರ್ ನಾಗರಾಜಯ್ಯ, "ಎಲ್ಲಿದೆ ಹೆಣ ?" ಎಂದು ಕೇಳಿದ.

ಸುನೀಲ್ ತಾನು ತೋರಿಸುತ್ತೇನೆ ಎಂಬಂತೆ ಅವರೊಂದಿಗೆ ಮಹಡಿಯ ಮೆಟ್ಟಿಲ ಕಡೆ ನಡೆದ.

ಅವನನ್ನು ಅರ್ಧದಲ್ಲಿಯೆ ತಡೆಯುತ್ತಾ, "ನಿಲ್ಲಿರೀ... ಮೊದಲು ಹೆಣಾನ ಯಾರು ನೋಡಿದ್ದು? ಅವರೆಲ್ಲಿ?" ಎಂದು ನಾಗರಾಜಯ್ಯ ಕೇಳಿದ.

ಅಲ್ಲಿಯೆ ಇದ್ದ ಸುಮಾರು ಅರವತ್ತು ವಯಸ್ಸಿನ ಹೆಂಗಸೊಬ್ಬಳು ಮುಂದೆ ಬಂದು, "ನಾನೇ ನೋಡಿದ್ದು'' ಎಂದಳು. ಅವಳ ವೇಷ ಭೂಷಣಗಳಿಂದ ಅವಳು ಅಲ್ಲಿಯ ಕೆಲಸದವಳು ಎಂಬುದು ಗೊತ್ತಾಗುತ್ತಿತ್ತು.

''ರೀ ಫೊರೆನ್ಸಿಕ್ ನೋಡ್ತಾ ಇರಿ, ಬರ್ತೀನಿ. ಇವರನ್ನ ವಿಚಾರಿಸಿ'' ಎಂದು ಅವರೊಂದಿಗೆ ಬಂದಿದ್ದ ಫೊರೆನ್ಸಿಕ್‌ನವರಿಗೆ ಹೇಳಿದ. ಅಲ್ಲಿದ್ದ ಕಾನ್‌ಸ್ಟೆಬಲ್ ಒಬ್ಬ ನಾಗರಾಜಯ್ಯನ ಮಾತು ಕೇಳಿಸಲೇ ಇಲ್ಲ ಎಂಬಂತೆ ''ನಡಿರಿ ಸಾರ್, ಮೊದಲು ಸ್ಪಾಟ್ ನೋಡೋಣ. ನಂತರ ವಿಚಾರಣೆ ಇದ್ದಿದ್ದೆ ಅಲ್ಲವಾ'' ಎಂದು ಅವನನ್ನು ಮಹಡಿಯ ಮೆಟ್ಟಿಲೆಡೆ ಕರೆದೊಯ್ದ.

ಇನ್‌ಸ್ಪೆಕ್ಟರ್ ವರ್ತನೆ ಎಲ್ಲರಿಗೂ ಆಶ್ಚರ್ಯ ತಂದಿತು. ಒಬ್ಬ ಪೊಲೀಸ್ ಅದರಲ್ಲಿಯೂ ಅನುಭವಸ್ಥ ಈ ರೀತಿ ಅಸಡ್ಡೆ ತೋರುವುದು, ಅದೂ ಒಂದು ಅಸಹಜ ಸಾವು ಆಗಿರುವಾಗ...

"ರಿಟೈರ್ ಆಗಕ್ಕೆ ಇನ್ನೇನು ತಿಂಗಳು ಇದೆ, ಹೊಸ ಕೇಸ್ ತಗಲ್ಹಾಕ್ ಬೇಡಿ ಅಂದೆ ನಮ್ಮ ಎ.ಸಿ.ಪಿ.ಗೆ. ಬಿಡಲಿಲ್ಲ, ಕಳಿಸಿದರು. ಇಲ್ಲಿಯ ತನಕ ಯಾವ ಕೇಸ್ ಕೂಡಾ ಬಾಕಿ ಉಳಿಸಿಲ್ಲ. ಸುಮ್ಮನೆ ನನಗೆ ಒಂದು ತಲೆ ನೋವು" ಎಂದು ಗೊಣಗುತ್ತಲೇ ಮೆಟ್ಟಿಲು ಹತ್ತಿದ.

"ಸರ್ ಸತ್ತಿರುವವರು ನಮ್ಮ ದೊಡ್ಡಪ್ಪ ಆಗಬೇಕು. ನಾನು ಅವರ ದೂರದ ಸಂಬಂಧಿ. ನಿನ್ನೆ ನಾವೆಲ್ಲ ಇಲ್ಲಿಗೆ ಬಂದು ಸೇರಿದೆವು. ರಾತ್ರಿ ಊಟಕ್ಕೂ ಸಿಕ್ಕಿಲ್ಲ. ಆದರೆ, ಬೆಳಗ್ಗೆ ತಿಂಡಿ ತಿಂದಾದ ಮೇಲೆ ಎಲ್ಲರೂ ಕೂತು ಮಾತಾಡೋಣ ಅಂದಿದ್ದರು. ಅಷ್ಟರಲ್ಲಿ ಹೀಗಾಗಿದೆ" ಎನ್ನುತ್ತಾ ಸುನೀಲ್ ಮಹಡಿ ಹತ್ತಿದ ಕೂಡಲೇ ಸಿಗುವ ಒಂದು ರೂಂನ ಒಳಗಡೆ ಕರೆದೊಯ್ದ.

ಅದು ಒಂದು ವಿಶಾಲವಾದ ಬೆಡ್‌ರೂಮ್. ಅಲ್ಲಿ ಮಂಚ ಮತ್ತು ಬಟ್ಟೆಗಳನ್ನಿಡುವ ಕಬೋರ್ಡ್ ಬಿಟ್ಟರೆ ಇನ್ನೇನೂ ಇರಲಿಲ್ಲ. ಇಡೀ ರೂಂ ಖಾಲಿ. ಮಂಚದ ಮೇಲಿದ್ದ ಹೊದಿಕೆ ಕೂಡಾ ಮುದುಡಿರಲಿಲ್ಲ. ಪೊಲೀಸರೂ ಎಲ್ಲಿದೆ ಹೆಣ ಎಂದು ಅತ್ತ ಇತ್ತ ತಡಕಾಡುತ್ತಿರುವಾಗ ಸುನೀಲ್ ಮಂಚದ ಬಲಗಡೆ ಇದ್ದ ಒಂದು ಕಬೋರ್ಡ್‌ನ ಬಾಗಿಲು ತೆರೆದ. ಅದು ಕಬೋರ್ಡ್ ಆಗಿರಲಿಲ್ಲ. ಅದು ಅಲ್ಲಿಂದ ಇನ್ನೊಂದು ರೂಂಗೆ ಪ್ರವೇಶಿಸಲು ಇದ್ದ ಬಾಗಿಲಾಗಿತ್ತು. ಅದನ್ನು ನೋಡಿ ಎಲ್ಲರಿಗೂ ಅಚ್ಚರಿಯಾಯಿತು. ಅಲ್ಲಿ ಒಂದು ಬಾಗಿಲು ಇರಬಹುದು ಎಂಬುದನ್ನು ಊಹಿಸುವಂತೆಯೂ ಇರಲಿಲ್ಲ. ಆ ಬಾಗಿಲಿನಿಂದ ಒಳ ಪ್ರವೇಶಿಸಿದರೆ ಅಲ್ಲೊಂದು ವಿಶಾಲವಾದ ರೂಂ ಇತ್ತು. ಮೂಲೆಯಲ್ಲಿ ಓದುವ ಕುರ್ಚಿ, ಅದಕ್ಕೆ ಅಂಟಿಕೊಂಡಂತೆ ಮೇಜು ಮತ್ತು ಇನ್ನೊಂದು ಕುರ್ಚಿಯನ್ನು ಇಡಲಾಗಿತ್ತು.

ಇಡೀ ಕೋಣೆ ಆಡಂಬರದಿಂದ ಕೂಡಿತ್ತು. ಕೋಣೆಯಲ್ಲಿ ಪೇರಿಸಿಟ್ಟ ಪುಸ್ತಕಗಳು, ಮತ್ತಿತರ ಬೆಲೆಬಾಳುವ ವಸ್ತುಗಳಿದ್ದವು. ಅದನ್ನು ನೋಡಿದರೆ ಆ ಕೋಣೆಯನ್ನು ಬಹಳ ಕಾಳಜಿಯಿಂದ ನೋಡಿಕೊಳ್ಳಲಾಗುತ್ತಿತ್ತು ಎಂದು ಹೇಳಬಹುದಿತ್ತು. ಇಡೀ ರೂಂನಲ್ಲಿ ಯಾವ ಕಿಟಕಿಗಳೂ ಇರಲಿಲ್ಲ; ಎದುರು ಬದುರು ಗೋಡೆಯಲ್ಲಿದ್ದ ಏಸಿಯಿಂದ ತಣ್ಣನೆ ಗಾಳಿ ಬರುತ್ತಿತ್ತು.